# MYSORE LEGISLATIVE ASSEMBLY

NINTH DAY.

*Saturday, 31st March 1962.*

The House met in the Assembly Hall, Vidhana Soudha, Bangalore, at Thirty Minutes past Eight of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

## STARRED QUESTIONS.

**(to which oral answers were given.)**

### Finalisation of estimate regarding the construction of the bridge across Basavanahalli-Kolhihalla in Arkalgud Taluk.

*Q.—32. Sri G. A. THIMMAPPA GOWDA (Arkalgud).—

Will the Government be pleased to state :—

(*a*) whether any estimate has been finalised regarding the construction of the bridge across Basavanahalli-Kolhihalla between Keralapura-Basavanahalli in Ramnathpur Hobli, Arkalgud Taluk;

(*b*) the action taken to expedite the work ?

*A.*—Sri VEERENDRA PATIL (Minister for Public Works and Transport).—

(*a*) and (*b*) The estimate is under scrutiny in the Department.

ಶ್ರೀ ಜಿ.ಎ. ತಿಮ್ಮಪ್ಪಗೌಡ.—ಈ ಕೇರಳಾಪುರ-ಬಸವನಹಳ್ಳಿ ಸೇತುವೆ ಆಗಬೇಕೆಂದು ಎಷ್ಟು ವರ್ಷಗಳಿಂದ ಕೇಳುತ್ತಾ ಇದ್ದಾರೆ, ಸ್ವಾಮಿ ?

†ಶ್ರೀ ವೀರೇಂದ್ರ ಪಾಟೀಲ್.—ಎಷ್ಟುವರ್ಷಗಳಿಂದ ಎಂಬ ಬಗ್ಗೆ ಸಮಾಚಾರ ಇಲ್ಲಿ ಇಲ್ಲ. ಎಸ್ಟಿಮೇಟು ತಯಾರಾಗುತ್ತಾ ಇದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಪ್ರಶ್ನೆ ಕೇಳಿದ ಉದ್ದೇಶ ಮೂರು ವರ್ಷಗಳಿಂದ ಈ ಸೇತುವೆ ಆಗಬೇಕೆಂದು ಕೇಳುತ್ತಾ ಇದ್ದರೂ ಇನ್ನೂ ಆಗಿಲ್ಲ. ಬೇಗನೆ ತ್ವರಿತಗೊಳಿಸುವುದಕ್ಕೆ ಪ್ರಯತ್ನ ಮಾಡಿ ಈ ಸೇತುವೆಯ ಕೆಲಸವನ್ನು ಮಾಡಿಸುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೇ ಅಸಿಸ್ಟೆಂಟ್ ಇಂಜಿನಿಯರ್ ಇದಕ್ಕೆ ಸಂಬಂಧಪಟ್ಟಂತೆ ಎಸ್ಟಿಮೇಟು ಕಳುಹಿಸಿದ್ದಾರೆ. ಹಾಸನ ಡಿವಿಜನ್‌ನಲ್ಲಿ ಸ್ಕೂಟಿನಿ ಆಗುತ್ತಾ ಇದೆ. ಆದಷ್ಟು ತೀವ್ರ ಕೆಲಸ ಪುರುಮಾಡುತ್ತೇವೆ.

ಶ್ರೀ ಜಿ.ಎ. ತಿಮ್ಮಪ್ಪಗೌಡ.—ಇದರ ಎಸ್ಟಿಮೇಟು ಎಷ್ಟಕ್ಕೆ ಆಗಿದೆ, ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಸ್ಕೂಟಿನಿ ಆಗುತ್ತಾ ಇದೆ ಎಂದು ಹೇಳಿದೆ. ಕೊನೆಯದಾಗಿ ಎಸ್ಟಿಮೇಟ್ ವಂಜೂರಾಗಿಲ್ಲ. ಎಸ್ಟಿಮೇಟ್ ಸ್ಕೂಟಿನಿ ಆದ ಮೇಲೆ ಎಷ್ಟಾಗುತ್ತದೆ ಎಂಬುದನ್ನು ಹೇಳಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಮಾಡಿರುವಷ್ಟರ ಮಟ್ಟಿಗೆ ಅಂದಾಜು ಎಷ್ಟಾಗಿದೆ ?

ಶ್ರೀ ವೀರೇಂದ್ರ ಪಾಟೀಲ್.—16,800 ರೂಪಾಯಿ ಆಗಬಹುದು.

---

### Construction of a bridge across Cauvery River near Keralapur in Arkalgud Taluk.

*Q.—36. Sri G. A. THIMMAPPA GOWDA (Arkalgud).—

Will the Government be pleased to state :—

(*a*) whether any representation was made to the Public Works Department Minister during the time of cattle show at Ramanathpur in 1960 and at other times requesting for the construction of a bridge near Keralapura in Arkalgud Taluk across Cauvery River ;

†Indicates rule that the remarks or speeches have not been revised by the member concern

(SRI G. A. THIMMAPPA GOWDA)

(*b*) whether this site has been examined ;

(*c*) whether any other representations have been received by Government in this behalf ;

(*d*) if so, whether these sites have been inspected ;

(*e*) the action taken by Government in the matter ?

*A*.—Sri VEERENDRA PATIL (Minister for Public Works and Transport).—

(*a*) Yes.

(*b*) Being examined.

(*c*) Yes.

(*d*) Will be inspected.

(*e*) Government have requested the Department to inspect the sites for the proposed bridge. Further action will be taken on receipt of report from the Department.

ಶ್ರೀ ಜಿ.ಎ. ತಿಮ್ಮಪ್ಪಗೌಡ —ಇಲ್ಲಿ ಎರಡು ಸ್ಥಳಗಳನ್ನು ಪರಿಶೀಲನೆ ಮಾಡಿದೆ ಎಂದು ಹೇಳಿದ್ದೀರಿ. ಇನ್ನೊಂದು ಯಾವುದು ಸ್ವಾಮಿ ?

†ಶ್ರೀ ವೀರೇಂದ್ರ ಪಾಟೀಲ್.— ಒಂದು ಕೇರಳಾಪುರ, ಇನ್ನೊಂದು ದೊಡ್ಡ ಹನಸೋಗೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.— ಹನಸೋಗೆ ಬಳಿ ಪರಿಶೀಲನೆ ಮಾಡಿ ಸೇತುವೆ ಕಟ್ಟಬೇಕೆಂದಾಗ ಕೇರಳಾಪುರದವರೂ ಕೂಡ, ಅಲ್ಲಿ ಸೇತುವೆ ಕಟ್ಟುವುದಕ್ಕೆ ಮುಂಚೆ, ಎರಡು ಜಾಗಗಳನ್ನು ಪರಿಶೀಲನೆ ಮಾಡಿ ಯಾವುದು ಯುಕ್ತವಾಗುವುದೋ ಅದನ್ನು ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಕೇರಳಾಪುರದವರು ತಮ್ಮ ಊರಿನ ಹತ್ತಿರವೇ ಆಗಬೇಕೆಂದು ಹೇಳುತ್ತಾ ಇದ್ದರು. ಅದೇ ರೀತಿ ದೊಡ್ಡ ಹನಸೋಗೆಯವರು ಕೂಡ ಹೇಳುತ್ತಾ ಇದರು. ಅದರ ನಲುವಾಗಿ ಎಕ್ಸಿಕ್ಯುಟೀವ್ ಇಂಜಿನಿಯರ್ ಹಾಸನ ಡಿವಿಜ್ ಮಸ್ತು ಕೆ. ಆರ್. ಡಿವಿಜ್ ಇವರಿಬ್ಬರೂ ಈ ವಿಷಯದಲ್ಲಿ ರಿಪೋರ್ಟ್ ಮಾಡಬೇಕೆಂದು ಹೇಳಲಾಗಿತ್ತು. ಇಬ್ಬರಲ್ಲೂ ಮತಭೇದವಾಗುತ್ತಾ ಇದೆ. ಹಾಸನದವರು ಕೇರಳಾಪುರದ ಹತ್ತಿರ ಆಗಬೇಕೆಂದು ಹೇಳುತ್ತಾ ಇದ್ದಾರೆ. ಕೆ. ಆರ್. ನಗರದ ಡಿವಿಜ್ ನವರು ಹನಸೋಗೆ ಹತ್ತಿರ ಆಗಬೇಕೆಂದು ಹೇಳುತ್ತಾ ಇದ್ದಾರೆ. ಅದಕ್ಕೇ ಚೀಫ್ ಇಂಜಿನಿಯರ ಅಭಿಪ್ರಾಯ ವೇನೆಂಬುದನ್ನು ಅವರೇ ಪ್ರತ್ಯಕ್ಷವಾಗಿ ಅಲ್ಲಿಗೆ ಹೋಗಿ ನೋಡಿ ಸರ್ಕಾರಕ್ಕೆ ರಿಪೋರ್ಟ್ ಮಾಡಬೇಕೆಂದು ಸೂಚನೆ ಕೊಟ್ಟಿದ್ದೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇದಕ್ಕೆ ಮುಂಚೆ ಕೇರಳಾಪುರದವರು ಎರಡು ಜಾಗಗಳನ್ನು ಪರಿಶೀಲನೆ ಮಾಡಿ ಆ ಮೇಲೆ ಸರ್ಕಾರ ತೀರ್ಮಾನ ಮಾಡಬೇಕೆಂದು ಒತ್ತಾಯ ಮಾಡಿದ್ದರೂ ಸರ್ಕಾರದವರು ಕೇರಳಾಪುರದ ಸ್ಟೆಟ್ ಡಿಮರ್ಶೆ ಮಾಡಿದ್ದೇ ಅತುರ ಅತುರವಾಗಿ ಹನಸೋಗೆಯಲ್ಲಿ ಆಗಬೇಕೆಂದು ಬಡ್ಜೆಟ್‌ನಲ್ಲಿ ಸೇರಿಸಲು ಪ್ರಮೇಯ ಏನಿತ್ತು ?

ಶ್ರೀ ವೀರೇಂದ್ರ ಪಾಟೀಲ್.—ಇನ್ನೂ ಅಂತಿಮ ನಿರ್ಧಾರ ತೆಗದುಕೊಂಡಿಲ್ಲ. ಇದಕ್ಕೆ ಸಂಬಂಧಪಟ್ಟ ಎಕ್ಸಿಕ್ಯುಟೀವ್ ಇಂಜಿನಿಯರು ಮತ್ತು ಸೂಪರ್ ಇಂಟೆಂಡಿಂಗ್ ಇಂಜಿನಿಯರ ವರದಿಯನ್ನು ಕೇಳಿದ್ದೆವು. ಇಂಜಿನಿಯರುಗಳಲ್ಲಿ ಮತ ಭೇದ ಬಂದದ್ದರಿಂದ ಚೀಫ್ ಇಂಜಿನಿಯರೇ ಪ್ರತ್ಯಕ್ಷವಾಗಿ ನೋಡಿ ರಿಪೋರ್ಟ್ ಮಾಡಬೇಕೆಂದು ಹೇಳಿದ್ದೇವೆ. ರಿಪೋರ್ಟ್ ಬಂದ ಮೇಲೆ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ ಈ ವಿಷಯದಲ್ಲಿ ಹಿಂದೆ ಆಗಲೇ ಒಂದು ಸಾರಿ ಸರ್ಕಾರದವರು ಆಖೈರು ತೀರ್ಮಾನವನ್ನು ತೆಗೆದುಕೊಳ್ಳಲಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ನನ್ನ ಹತ್ತಿರ ಇದ್ದ ರಿಪೋರ್ಟ್ ಪ್ರಕಾರ ಈ ಎರಡು ಸೈಟ್‌ಗಳ ಬಗ್ಗೆ ರಿಪೋರ್ಟ್ ಕೇಳಲಾಗಿದೆ. ಇನ್ನೂ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ. ಚೀಫ್ ಇಂಜಿನಿಯರಿಗೆ ನೀವೇ ಸ್ವಂತವಾಗಿ ಹೋಗಿ ಇನ್‌ಸ್ಪೆಕ್ಷ್ ಮಾಡಿ ರಿಪೋರ್ಟ್ ಕೊಡಿ ಎಂದು ಹೇಳಿದ್ದೇವೆ. We are awaiting his report.

Sri D. DEVARAJ URS.—Is it not a fact that the previous Ministry had already taken a decision ?

Mr. SPEAKER.—He has answered that question.

ಶ್ರೀ ಡಿ. ದೇವರಾಜ ಅರಸ್.—ಹಾಗಾದರೆ ಈಗ ತಾವು ಆ ತೀರ್ಮಾನವನ್ನು ಪುನರ್ ಪರಿಮರ್ಶೆ ಮಾಡಬೇಕೆಂದು ಏನಾದರೂ ಯೋಚನೆ ಮಾಡುತ್ತಾ ಇದ್ದೀರಾ ?

Sri VEERENDRA PATIL.—That is why I have already stated that to my knowledge, no final decision has been taken. We are awaiting a report from the Chief Engineer.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಹಿಂದೆ ಹನಸೋಗೆಯ ವಿಚಾರದಲ್ಲಿ ಎಕ್ಸಿಕ್ಯುಟೀವ್ ಇಂಜಿನಿಯರು ಆಗಲೇ ಒಂದು ಅಭಿಪ್ರಾಯವನ್ನು ಕೊಟ್ಟಿರುವುದರಿಂದ ಮಾನ್ಯ ಮಂತ್ರಿಗಳು ಈ ವಿಷಯವನ್ನು ಚೀಫ್ ಇಂಜಿನಿಯರ ಜೊತೆಯಲ್ಲಿ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳುವುದು ಉತ್ತಮವಲ್ಲವೇ ?

Sri VEERENDRA PATIL.—That is a suggestion for action.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಸಭೆಯಲ್ಲಿ ಹಿಂದಿನ ಮಂತ್ರಿ ಮಂಡಲದಲ್ಲಿದ್ದ ಲೋಕೋಪಯೋಗಿ ಮಂತ್ರಿಗಳು ಈ ವಿಷಯದಲ್ಲಿ ಆದಷ್ಟು ಬೇಗ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಉತ್ತರ ಕೊಟ್ಟಿದ್ದು ತಮಗೆ ಜ್ಞಾಪಕವಿಲ್ಲವೇ ? ಅಥವಾ ಆ ಪ್ರೊಸೀಡಿಂಗ್ಸ್ ನೋಡಿ ಉತ್ತರ ಹೇಳುವುದಕ್ಕೆ ಸಾಧ್ಯವೇ ?

ಶ್ರೀ ವೀರೇಂದ್ರ ಪಾಟೀಲ್.—ಅದು ಗೊತ್ತಿಲ್ಲ.

Sri B. NANJAPPA.—May I know whether the Minister has inspected the site personally ?

Sri VEERENDRA PATIL.—No, I have not inspected the site.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.— ಹಿಂದಿನ ಮಂತ್ರಿಗಳು ತೀರ್ಮಾನ ತೆಗೆದುಕೊಂಡಿಲ್ಲವೇ ? ನೀವೇ ಇನ್‌ಸ್ಪೆಕ್ಷ್ ಮಾಡುವ ಅವಶ್ಯಕತೆ ಏನಿದೆ ?

ಶ್ರೀ ವೀರೇಂದ್ರ ಪಾಟೀಲ್.—ಹಿಂದಿನ ಮಂತ್ರಿಗಳು ಅಂತಿಮ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ನನ್ನ ಹತ್ತಿರ ಇರುವ ಇಫರ್ಮೇಷನ್‌ದಿಂದ ಕಂಡು ಬರುವುದಿಲ್ಲ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಒಂದು ವೇಳೆ ಅಂತಿಮ ನಿರ್ಧಾರವನ್ನು ತೆಗೆದು ಕೊಂಡಿದ್ದರೆ ಚೀಫ್ ಇಂಜನಿಯರಿಗೆ ರಿಪೋರ್ಟ್ ಕಳುಹಿಸಿ ಎಂದು ಹೇಳುವ ಪ್ರಮೇಯವೇ ಇರುತ್ತಿರಲಿಲ್ಲ. ಇದರಿಂದಲೇ ಅಂತಿಮ ತೀರ್ಮಾನವನ್ನು ತೆಗೆದುಕೊಂಡಿಲ್ಲ ಎಂದು ಅರ್ಥವಾಗುತ್ತದೆ.

Sri G. A. THIMMAPPA GOWDA.—Is it not a fact that technical opinion is given regarding this scheme ?

Sri VEERENDRA PATIL.—I am not able to know what the Hon'ble member means by technical opinion. We had referred this matter to the Executive Engineers, Hassan and Mysore Divisions. They have submitted their reports and since those reports are conflicting, we have asked the Chief Engineer to inspect and furnish a report. They are the technical persons.

Mr. SPEAKER.—Question time is over.

---

## QUESTION FOR ANSWER ON THE DAY

**(but not taken up.)**

**Uniform rules for payment of grant towards recurring and non-recurring expenditure in respect of dispensaries vested in T.D. Boards.**

*Q.—18. Sri G. VENKATAI GOWDA (Palaiyam).—

Will the Government be pleased to state :—

(*a*) whether they have framed uniform rules for the payment of grant towards recurring and non-recurring expenditure in respect of the local and other types of dispensaries vested in the management of Taluk Development Boards in Mysore State ;

(*b*) the policy adopted in that behalf ?

*A.—Dr. K. NAGAPPA ALVA (Minister for Health).—

(*a*) No.

(*b*) The policy that was in vogue in the different integrated areas of the State prior to re-organisation is being continued pending formation of a uniform procedure.

---

## MYSORE UNIVERSITY (AMENDMENT) BILL, 1962.

*Introduction.*

Sri S. R. KANTHI (Chief Minister).—I beg to introduce the Mysore University (Amendment) Bill, 1962.

Mr. SPEAKER.—The Mysore University (Amendment) Bill, 1962 is introduced.

---

## Member's Representation.

†ಶ್ರೀ ಸಿ. ಜೆ. ಮುನಿಕೃಷ್ಣಪ್ಪ (ಸಿರಾ).—ಸ್ವಾಮಿ, ಅಧ್ಯಕ್ಷರೇ, ತಮ್ಮಲ್ಲಿ ಒಂದು ವಿಷಯವನ್ನು ಅರಿಕೆ ಮಾಡಿ ಕೊಳ್ಳಬೇಕೆಂದು ಇದ್ದೇನೆ. ರಾಜ್ಯಾಂಗ ದತ್ತವಾದ ಹಕ್ಕನ್ನು ಈ ಸರ್ಕಾರ ಕಸಿದುಕೊಂಡಿದೆ. ಈ ಸಭೆ ಸಂಪೂರ್ಣವಾಗಿಲ್ಲ. ರಾಜ್ಯಾಂಗದತ್ತವಾಗಿದ್ದ ಒಂದು ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿದೆ. ಇದು ರಾಜ್ಯಾಂಗಕ್ಕೆ ವಿರೋಧವಾಗಿದೆ. ವಿಷಯ ಏನೆಂದರೆ ರಾಜ್ಯಾಂಗದಲ್ಲಿ ಆಂಗ್ಲೋ ಇಂಡಿಯರ್‌ಗೆ ಒಂದು ರೆಪ್ರೆಸೆಂಟೇಷನ್ ಕೊಡಬೇಕು. ಆ ರೆಪ್ರೆಸೆಂಟೇಷನ್ ಇಲ್ಲದ ಈ ಸಭೆ ಸಂಪೂರ್ಣವಾಗುವುದಿಲ್ಲ. ರಾಜ್ಯಾಂಗದಲ್ಲಿ ಆರು ತಿಂಗಳೊಳಗೆ ಮಾಡಬೇಕು ಅಥವಾ ಅಷ್ಟರೊಳಗೇ ಮಾಡಬೇಕೆಂದಿದ್ದರೂ ಸರ್ಕಾರ ಈ ಸಭೆ ಕುಳಿತು 20 ದಿನವಾದರೂ ಆ ಕಡೆಗೆ ಗಮನ ಕೊಡದಿರುವುದನ್ನು ನೋಡಿದರೆ ಅವರು ನಮ್ಮ ರಾಜ್ಯಾಂಗಕ್ಕೆ ಗೌರವ ಕೊಟ್ಟಿಲ್ಲ. ಅದು ರಾಜ್ಯಾಂಗದ ಧ್ಯೇಯ, ನಿಯಮಾವಳಿಗಳಿಗೆ ಅವರು ಅಗೌರವ ತೋರಿಸಿದಂತೆ. ಈ ಸಭೆ ಸಂಪೂರ್ಣವಾಗಿಲ್ಲ ಎಂದು ಅಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುತ್ತಾ ಇದ್ದೇನೆ. ಈ ಸಭೆ ಪೂರ್ಣವಾಗಿದೆಯೇ ಇಲ್ಲವೇ, ಆಂಗ್ಲೋ ಇಂಡಿಯರ್ ರೆಂಪ್ರಸೆಂಟೇಟೀವ್ ಯಾರು ಎಂಬ ಅನುಮಾನವಿರುವುದರಿಂದ ಸರ್ಕಾರ ಈ ವಿಷಯದ ಮೇಲೆ ಒಂದು ವಿವರವಾದ ಹೇಳಿಕೆಯನ್ನು ಕೊಡಬೇಕೆಂದು ನಾನು ತಮ್ಮ ಮುಖಾಂತರ ಕೇಳುತ್ತೇನೆ.

Mr. SPEAKER.—Does the Hon'ble Chief Minister want to say anything ?

ಶ್ರೀ ಎಸ್. ಆರ್. ಕಂತಿ (ಮುಖ್ಯ ಮಂತ್ರಿಗಳು).—ಈ ವಿಷಯದಲ್ಲಿ ಶ್ರೀಮಾನ್ ಮುನಿಕೃಷ್ಣಪ್ಪನವರು ಹೇಳುವುದು ನಿಯಮವಿಲ್ಲವೆಂದು ನನಗೆ ಕಾಣುತ್ತದೆ. I will read the Article.

> "333. Notwithstanding anything in article 170, the Governor of a State may, if he is of opinion that the Anglo-Indian Community needs representation....."